**ಕರ್ನಾಟಕ ಸರ್ಕಾರ**

**55ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ**

**ಎಸ್.ಸಿ.ನಂ.599/2020**

**ಪ್ರಮಾಣ ವಚನ ಬೋಧಿಸಲಾಯಿತು.**
**ದಿನಾಂಕಃ 19.06.2023.**
**ಪಿಡಬ್ಲ್ಯೂಃ 2 ಸಿಡಬ್ಲ್ಯೂಃ 3**

**ಹೆಸರು ಃ ಶ್ರೀಮತಿ ಶ್ಯಾಮಲ**
**ತಂದೆಯು ಹೆಸರು ಃ ರಾಮದಾಸ್**
**ವಯಸ್ಸು ಃ 52 ವರ್ಷ**
**ಉದ್ಯೋಗ ಃ ಗೃಹಿಣಿ**
**ವಾಸ ಃ ಬನಶಂಕರಿ, ಬೆಂಗಳೂರು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿ ನಿಪಿ.2 ರ ಸ್ಥಳ ಪಂಚನಾಮೆ ಮೇಲೆ ಇದ್ದ ಸಹಿಯಾಗಿದ್ದು ಈ ಸಹಿಯನ್ನು **ನಿಪಿ.2(ಬಿ)** ಎಂದು ಗುರುತಿಸಲಾಯಿತು. ದಿಃ14.01.2020 ರಂದು 15 ನೇ ಮೈನ್, 22 ನೇ ಕ್ರಾಸ್, ಮನೆ ನಂ.623 ರ ಮನೆ ಮುಂಭಾಗದಲ್ಲಿ ಪೊಲೀಸರು ಬಂದು ಮಹಜರು ಮಾಡಿದರು. ಚಾಸಾಃ2 ರವರು ಮನೆಯ ಒಳಗಡೆ ಇದ್ದಾಗ ಅವರ ಬಾಯಿ ಒಳಗೆ ಈರುಳ್ಳಿ ಹಾಕಿ ಪ್ಲಾಸ್ಟರ್ ಹಾಕಿ ಚೈನು ಕಿತ್ತುಕೊಂಡು ಹೋಗಿದ್ದು ಚಾಸಾಃ2 ರವರು ಕಿರಡುಚಿಕೊಂಡು ಹೊರಗಡೆ ಬಂದಿದ್ದರು. ನಾನು ಅದೇ ಕಟ್ಟಡದ ಮೊದಲನೇ ಮಹಡಿಯಲ್ಲಿ ಇದ್ದಿದ್ದು ಅವರು ಕಿರುಚಿಕೊಂಡಿದ್ದರಿಂದ ಕೆಳಗಡೆ ಬಂದೆ. ನಂತರ ನಾನು 100 ಕ್ಕೆ ಫೋನ್

ಮಾಡಿದೆ. ಪೊಲೀಸರು ಬಂದರು. ನಂತರ ಚಾಸಾಃ1 ರವರು ಪೊಲೀಸರಿಗೆ ದೂರು ಕೊಟ್ಟಿದ್ದರು. ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದರು. ಅಲ್ಲೇ ಬರವಣಿಗೆ ಮಾಡಿ ನನ್ನ ಸಹಿ ಪಡೆದರು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರು ಇರದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯುದಲ್ಲಿ ಗಣಕೀಕರಿಸಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**(ಶ್ರೀರಾಮ ನಾರಾಯಣ ಹೆಗಡೆ)**
**55ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,**
**(ಸಿಸಿಹೆಚ್-56), ಬೆಂಗಳೂರು ನಗರ.**